# BOBAK GOAT

## Munro Leaf

Bobak Goat gets tired following the leader. He decides that he will not go from one place to another simply because others are going. He will decide for himself - where he wants to go, why he wants to go and how he wants to go. Now Bobak has started thinking for himself and he is much happier than before.




# ಬೋಬಕ್ ಮೇಕೆ

## ಮನ್ರೋ ಲೀಫ್

### ಅನುವಾದ : ಕೆ ಜಿ ರಾಜಲಕ್ಷ್ಮಿ

ಬೋಬಕ್ ಮೇಕೆ ನಾಯಕನನ್ನು ಹಿಂಬಾಲಿಸುತ್ತಲೇ ಸಾಗಿ ಬಳಲುತ್ತದೆ. ಕಡೆಗೆ ಅದು ಒಂದೆಡೆಯಿಂದ ಮತ್ತೊಂದೆಡೆಗೆ ಕೇವಲ ಬೇರೆಯವರು ಹೋಗುವರೆಂಬ ಕಾರಣಕ್ಕಾಗಿ ಹೋಗುವುದಿಲ್ಲವೆಂದು ನಿಶ್ಚಯಿಸುತ್ತದೆ. ತಾನು ಎಲ್ಲಿಗೆ ಹೋಗಬೇಕು, ಏಕೆ ಹೋಗಬೇಕು ಮತ್ತು ಹೇಗೆ ಹೋಗಬೇಕು ಎಂದು ಸ್ವತಃ ತೀರ್ಮಾನಿಸುವುದು. ಈಗ ಬೋಬಕ್ ತನಗಾಗಿ ಆಲೋಚಿಸಲಾರಂಭಿಸುತ್ತದೆ. ಅದು ಮೊದಲಿಗಿಂತ ಹೆಚ್ಚು ಸಂತಸದಿಂದಿರುತ್ತದೆ.




There was a goat.
His name was Bobak.
He lived in a desert area.

ಒಂದು ಮೇಕೆಯಿತ್ತು.
ಅದರ ಹೆಸರು ಬೋಬಕ್.
ಅದು ಮರುಭೂಮಿ ಪ್ರದೇಶದಲ್ಲಿ ವಾಸಿಸುತ್ತಿತ್ತು.




He was only fond of eating.
He ate up whatever he could find.
He did not care about what he was eating.
He tried to bite whatever he saw.

ಅದಕ್ಕೆ ತಿನ್ನುವುದೆಂದರೆ ಬಹಳ ಇಷ್ಟ.
ಸಿಕ್ಕಿದ್ದನ್ನೆಲ್ಲಾ ತಿನ್ನುತ್ತಿತ್ತು.
ತಾನು ಏನು ತಿನ್ನುತ್ತಿದ್ದೇನೆ ಎಂಬ ಪರಿವೆಯೇ ಅದಕ್ಕಿರಲಿಲ್ಲ.
ಕಂಡದ್ದನ್ನೆಲ್ಲಾ ಕಚ್ಚಲು ಪ್ರಯತ್ನಿಸುತ್ತಿತ್ತು.




What he liked best were the leaves and pods of the Acacia Tree.

ಜಾಲಿಯ ಮರದ ಎಲೆಗಳು, ಕಾಯಿಗಳು
ಅದಕ್ಕೆ ಅಚ್ಚು ಮೆಚ್ಚು.



But if he found clothes hanging on a line, he would not mind chewing them up!

ಆದರೆ ಎಲ್ಲಿಯಾದರೂ ಹಗ್ಗದ ಮೇಲೆ
ಬಟ್ಟೆಗಳನ್ನು ಒಣಗಲು ಹಾಕಿದ್ದನ್ನು ನೋಡಿದರೆ
ಅದಕ್ಕೆ ಬಾಯಿ ಹಾಕಲೂ ಮುಂದಾಗುತ್ತಿತ್ತು.



Sometimes it would also try and bite the cactus plants.
But then he would regret doing that for a long time.

ಕೆಲವೊಮ್ಮೆ ಪಾಪಾಸು ಕಳ್ಳಿಯ ಗಿಡಗಳಿಗೂ ಬಾಯಿ ಹಾಕುತ್ತಿತ್ತು.
ಆದರೆ ಆಮೇಲೆ ಬಹಳ ಕಾಲದವರೆಗೂ ಪಶ್ಚಾತ್ತಾಪ ಪಡಬೇಕಾಗುತ್ತಿತ್ತು.

Sometimes he would enter someone’s kitchen.
There he would try to bite the fruits hanging from the basket.

ಒಮ್ಮೊಮ್ಮೆ ಯಾರದ್ದಾದರೂ ಅಡುಗೆ ಮನೆಯೊಳಗೆ ನುಸುಳುತ್ತಿತ್ತು. ಅಲ್ಲಿ ಬುಟ್ಟಿಯಲ್ಲಿ ತೂಗು ಹಾಕಿದ್ದ ಹಣ್ಣುಗಳಿಗೆ ಬಾಯಿ ಹಾಕುತ್ತಿತ್ತು.






Bobak stayed in a large pen
with other goats.

He did not have much to do there.

All he did the whole day was eat and
sleep. This was his work.
After some months some person would
come and shear his hair.

ಬೋಬಕ್ ಇತರೆ ಮೇಕೆಗಳೊಡನೆ ಒಂದು ದೊಡ್ಡ
ದೊಡ್ಡಿಯಲ್ಲಿ ಇರುತ್ತಿತ್ತು.
ಅಲ್ಲಿ ಅದಕ್ಕೆ ಮಾಡಲು ಕೆಲಸವೇನೂ ಇರಲಿಲ್ಲ.
ಇಡಿಯ ದಿನದಲ್ಲಿ ಅದು ಮಾಡುತ್ತಿದ್ದ ಕೆಲಸವೆಂದರೆ
ತಿನ್ನುವುದು, ಮಲಗುವುದು. ಇದೇ ಅದರ ಕೆಲಸ.
ಒಂದಷ್ಟು ತಿಂಗಳಾದ ಮೇಲೆ ಒಬ್ಬಾತನು ಬಂದು ಅದರ
ರೋಮಗಳನ್ನು ಕತ್ತರಿಸುತ್ತಿದ್ದನು.
(ಮರಳುಗಾಡು ಮತ್ತು ಹಿಮ ಪ್ರದೇಶಗಳಲ್ಲಿನ ಮೇಕೆಗಳು
ತುಪ್ಪಳವನ್ನು ಹೊಂದಿರುತ್ತವೆ.)




Some traders would buy this hair.

These people would make them into blankets and stuff them into mattresses.

Bobak couldn’t care less!
It didn’t bother him. He was only bothered that they did not hurt his skin while shearing his hair.

ಕೆಲವರು ವ್ಯಾಪಾರಿಗಳು ಈ ಕೂದಲನ್ನು ಕೊಳ್ಳುತ್ತಿದ್ದರು.
ಈ ಜನರು ಅವನ್ನು ಕಂಬಳಿಗಳನ್ನಾಗಿ ನೇಯುತ್ತಿದ್ದರು ಇಲ್ಲವೇ ಹಾಸಿಗೆಗಳಲ್ಲಿ ತುಂಬುತ್ತಿದ್ದರು.
ಬೋಬಕ್‌ಗೆ ಇದರ ಚಿಂತೆಯಿರಲಿಲ್ಲ! ಆದರೆ ಅದಕ್ಕೆ ಚಿಂತೆಯಿರದೇ ಇರಲಿಲ್ಲ.
ತನ್ನ ತುಪ್ಪಳದಿಂದ ಏನು ತಯಾರಾಗುತ್ತದೆ ಎನ್ನುವುದು ಅದಕ್ಕೆ ಮುಖ್ಯವಾಗಿರಲಿಲ್ಲ. ಅದರ ಗಮನವಿದ್ದುದು ಜನರು, ಕೂದಲನ್ನು ಕತ್ತರಿಸುವಾಗ ತನ್ನ ಚರ್ಮಕ್ಕೇನೂ ನೋವಾಗಬಾರದೆಂಬುದರ ಮೇಲೆ.




Some leaders were part of Bobak’s pack.

The others goats always followed these leaders.

When the leader got fed up one place he would move to some other place.

Then the other goats would also wag their tails and follow the leader.

**ಬೋಬಕ್ ಗುಂಪಿಗೆ ಕೆಲವು ಮುಖಂಡರಿದ್ದರು.**
**ಉಳಿದ ಮೇಕೆಗಳು ಈ ಮುಖಂಡರನ್ನು ಹಿಂಬಾಲಿಸುತ್ತಿದ್ದವು.**
**ನಾಯಕನಿಗೆ ಒಂದು ಸ್ಥಳ ಸಾಕೆನ್ನಿಸಿದರೆ ಅದು ಬೇರೆ ಸ್ಥಳಕ್ಕೆ ಹೋಗುತ್ತಿತ್ತು.**
**ಆಗ ಉಳಿದ ಮೇಕೆಗಳೂ ತಮ್ಮ ಬಾಲಗಳನ್ನಾಡಿಸುತ್ತಾ ನಾಯಕನನ್ನು ಹಿಂಬಾಲಿಸಿ ಹೋಗುತ್ತಿದ್ದವು.**



Along with the other goats Bobak also followed the leaders.

He did not know why he did it.
But he did not like the leaders very much.


But he did not find anyone of them particularly bad.

Therefore when the other goats went behind the leaders he followed too.

Perhaps, it was easiest to follow a leader.

But before starting Bobak would think and think for such a long time that the others goats would go far ahead and Bobak would be left behind.

**ಉಳಿದ ಮೇಕೆಗಳೊಡನೆ ಬೋಬಕ್ ಸಹ ಮುಖಂಡರ ಹಿಂದೆ ಹೋಗುತ್ತಿತ್ತು.**
**ಏಕೆ ಹೀಗೆ ಮಾಡುತ್ತಿರುವುದೆಂದು ಅದಕ್ಕೆ ಗೊತ್ತಿರಲಿಲ್ಲ.**
**ಆದರೆ ಅದಕ್ಕೆ  ನಾಯಕರೆಂದರೆ ಅಂತಹ ಆಸ್ಥೆಯೇನೂ ಇರಲಿಲ್ಲ.**
**ಆದರೆ ಅವರಲ್ಲಿ ಯಾರೊಬ್ಬರೂ ಅಷ್ಟೊಂದು ಕೆಟ್ಟವರೆಂದೂ ಅನ್ನಿಸುತ್ತಿರಲಿಲ್ಲ.**
**ಹೀಗಾಗಿ ಬೇರೆ ಮೇಕೆಗಳು ನಾಯಕನನ್ನು ಹಿಂಬಾಲಿಸುವಾಗ ಅದೂ ಅದರ ಹಿಂದೆ ಹೋಗುತ್ತಿತ್ತು.**
**ವಾಸ್ತವವೆಂದರೆ, ಒಬ್ಬ ನಾಯಕನನ್ನು ಹಿಂಬಾಲಿಸುವುದು ಎಲ್ಲಕ್ಕಿಂತ ಸುಲಭದ ಕೆಲಸ.**
**ಆದರೆ, ಹೊರಡುವ ಮೊದಲು ಬೋಬಕ್ ಎಷ್ಟು ಹೊತ್ತು ಯೋಚನೆಯಲ್ಲಿ ಮುಳುಗಿ ಹೋಗಿರುತ್ತಿತ್ತೆಂದರೆ ಉಳಿದ ಮೇಕೆಗಳೆಲ್ಲಾ ಇದನ್ನು ಬಿಟ್ಟು ಎಷ್ಟೋ ಮುಂದೆ ಹೋಗಿಬಿಟ್ಟಿರುತ್ತಿದ್ದವು.**



Then came a very hot day.

The leader goat did not like the place and he started in search of another place.

The other goats followed him.

Bobak also walked behind.
He was at the very end.


**ಒಮ್ಮೆ ಬಿರು ಬೇಸಗೆ ಬಂತು.**

**ನಾಯಕ ಮೇಕೆಗೆ ಆ ಸ್ಥಳ ಮೆಚ್ಚಿಕೆಯಾಗಲಿಲ್ಲ. ಅದು ಬೇರೊಂದು ಜಾಗವನ್ನು ಹುಡುಕತೊಡಗಿತು.**

**ಉಳಿದ ಮೇಕೆಗಳು ಅದನ್ನೇ ಅನುಸರಿಸಲಾರಂಭಿಸಿದವು.**

**ಬೋಬಕ್ ಸಹ ಹಿಂದೆ ಸಾಗಿತು.**

**ಅದು ಎಲ್ಲಕ್ಕಿಂತ ಕೊನೆಯಲ್ಲಿ ಇತ್ತು.**



They walked and walked
for a very long time.


With the scorching sun the whole
mountainside became very hot.

They found a new field
but the grass there was not soft.

Bobak tried to eat some grass
but he started feeling giddy.

He felt that he did not do the right thing
coming here with the other goats.

ಅವೆಲ್ಲಾ ತುಂಬಾ ಹೊತ್ತಿನವರೆಗೂ ನಡೆಯುತ್ತಲೇ ಇದ್ದವು.
ಮೇಲೆ ಉರಿಯುತ್ತಿದ್ದ ಸೂರ್ಯನಿಂದಾಗಿ ಪೂರಾ
ಪರ್ವತಪ್ರದೇಶವೇ ಬಿಸಿಯಾಗಿತ್ತು.
ಅವಕ್ಕೆ ಹೊಸತೊಂದು ಬಯಲೇನೋ ಕಂಡಿತು, ಆದರೆ ಅಲ್ಲಿ
ಹುಲ್ಲು ಮೃದುವಾಗಿರಲಿಲ್ಲ.
ಬೋಬಕ್ ಒಂದಿಷ್ಟು ಹುಲ್ಲು ತಿನ್ನಲೆತ್ನಿಸಿತು, ಆದರೆ ಅದಕ್ಕೆ ತಲೆ
ಸುತ್ತತೊಡಗಿತು.
ಆದಕ್ಕೆ ತಾನು ಅಲ್ಲಿಗೆ ಉಳಿದ ಮೇಕೆಗಳ ಜೊತೆ ಬಂದುದು
ಸರಿಯಾಗಲಿಲ್ಲವೆನಿಸಿತು.



So he sat there.

He decided to keep sitting there
until he felt better.

But Bobak had just sat down when the
leader goat decided to move on from there.

ಹೀಗಾಗಿ ಅದು ಅಲ್ಲಿಯೇ ಕುಳಿತಿತು.
ತಾನು ಸುಧಾರಿಸಿಕೊಳ್ಳುವವರೆಗೂ ಅಲ್ಲಿಯೇ ಕುಳಿತುಕೊಳ್ಳಲು
ತೀರ್ಮಾನಿಸಿತು.
ಆದರೆ ಬೋಬಕ್ ಕುಳಿತಿತ್ತಷ್ಟೇ, ನಾಯಕ ಅಲ್ಲಿಂದ ಹೊರಡಲು
ನಿರ್ಧರಿಸಿತು.



The leader started to move.

The other goats followed him.

Bobak was at the very end.

The truth was that he did not want to go anymore.




ಮುಂದಾಳು ಹೊರಟಿತು.

ಮಿಕ್ಕ ಮೇಕೆಗಳು ಅದನ್ನು ಅನುಸರಿಸಿದವು.

ಬೋಬಕ್ ಕಟ್ಟ ಕಡೆಯಲ್ಲಿತ್ತು.

ಸತ್ಯವೇನೆಂದರೆ ಅದಕ್ಕೆ ಮುಂದೆ ಎಲ್ಲಿಗೂ ಹೊರಡುವ ಮನಸ್ಸಿರಲಿಲ್ಲ.




Walking in the scorching sun Bobak kept pondering. Why did I come here in the first place? Why do the other goats foolishly follow the leader?

Why did he follow others for such a long time? Maybe the other goats have been following their leaders right from the beginning. Perhaps they have got used to following leaders for too long. Bobak was thinking about these questions. But still things were not clear in his mind.

ಸುಡುವ ಸೂರ್ಯನಡಿಯಲ್ಲಿ ನಡೆಯುತ್ತಿದ್ದ ಬೋಬಕ್ ತಲೆಯಲ್ಲಿ ವಿಚಾರಗಳು ತಾಕಲಾಡುತ್ತಿದ್ದವು. ಮೊದಲನೆಯದಾಗಿ ತಾನೇಕೆ ಇವರೊಡನೆ ಬಂದೆ? ಎಲ್ಲ ಮೇಕೆಗಳೂ ನಾಯಕ ಮೇಕೆಯನ್ನು ಪೆದ್ದರಂತೆ ಹಿಂಬಾಲಿಸುವುದೇಕೆ?

ತಾನೇಕೆ ಇಷ್ಟು ಸಮಯ ಉಳಿದವರನ್ನು ಹಿಂಬಾಲಿಸುತ್ತಲೇ ಬಂದೆ? ಇತರ ಮೇಕೆಗಳು ತಮ್ಮ ಮುಖಂಡನನ್ನು ಆರಂಭದಿಂದಲೂ ಅನುಸರಿಸುತ್ತಾ ಬಂದಿರಬಹುದು. ಅವಕ್ಕೆ ನಾಯಕನನ್ನು ಅನುಸರಿಸುವುದು ಬಹಳ ಕಾಲದಿಂದ ಅಭ್ಯಾಸವಾಗಿರಬಹುದು. ಈ ರೀತಿಯ ಪ್ರಶ್ನೆಗಳು ಬೋಬಕ್ ತಲೆಯಲ್ಲಿ ಸುತ್ತುತ್ತಿದ್ದವು. ಆದರೆ ವಿಷಯ ಮನಸ್ಸಿನಲ್ಲಿ ಸ್ಪಷ್ಟವಾಗುತ್ತಿರಲಿಲ್ಲ.



Bobak was deeply absorbed in his thoughts.

Suddenly he saw a black storm approaching him.

Black clouds rose from the ground
and went up to the sky.

Bobak had never seen such a large black mass.
He didn’t like it one bit.


But the black clouds kept advancing towards Bobak.

Bobak felt like fleeing away from them.

But the leader of the flock kept walking towards the storm.


And the black clouds kept advancing closer.

**ಬೋಬಕ್ ತನ್ನ ವಿಚಾರಗಳಲ್ಲಿ ಮುಳುಗಿಹೋಗಿತ್ತು.**
**ಇದ್ದಕ್ಕಿದ್ದಂತೆ ಕಪ್ಪು ಬಿರುಗಾಳಿಯೊಂದು ತನ್ನನ್ನು ಸಮೀಪಿಸುವುದನ್ನು ಅದು ಕಂಡಿತು. ಕರಿಯ ಮೋಡಗಳು ನೆಲದಿಂದೆದ್ದು ಮುಗಿಲನ್ನು ಮುಟ್ಟಿದವು.**
**ಬೋಬಕ್ ಇದುವರೆವಿಗೂ ಇಂತಹ ಆಕಾರವನ್ನು ನೋಡಿರಲಿಲ್ಲ.**
**ಅದಕ್ಕಿದು ಸ್ವಲ್ಪವೂ ಇಷ್ಟವಾಗಲಿಲ್ಲ.**
**ಆದರೆ ಆ ಕರಿಯ ಘನಾಕೃತಿಯು ಬೋಬಕ್‌ನತ್ತಲೇ ಬರುತ್ತಿತ್ತು.**
**ಬೋಬಕ್‌ಗೆ ಅವುಗಳಿಂದ ದೂರ ಓಡಿಹೋಗಬೇಕೆನ್ನಿಸಿತು.**
**ಆದರೆ ಗುಂಪಿನ ಮುಖಂಡನಾದರೋ ಆ ಬಿರುಗಾಳಿಯ ಕಡೆಗೇ ಸಾಗುತ್ತಿತ್ತು.**
**ಆ ಕರಿಯ ಮೋಡಗಳು ಹತ್ತಿರವಾಗುತ್ತಿದ್ದವು.**



All the goats got trapped in the storm.
It is no fun to get caught in a typhoon.
Bobak was quite frightened.
The moist clouds lifted him up.
The roaring wind tossed him here and there.
Bobak started rolling and tossing in the vortex of the storm.

**ಎಲ್ಲಾ ಮೇಕೆಗಳೂ ಆ ಬಿರುಗಾಳಿಯಲ್ಲಿ ಸಿಲುಕಿಕೊಂಡವು.**
**ಬಿರುಗಾಳಿಯಲ್ಲಿ ಸಿಕ್ಕಿಕೊಳ್ಳುವುದೆಂದರೆ ತಮಾಷೆಯ ವಿಷಯವಲ್ಲ.**
**ಬೋಬಕ್‌ಗೆ ಭಯವಾಯಿತು.**
**ತೇವವಾಗಿದ್ದ ಆ ಮೋಡಗಳು ಅದನ್ನು ಮೇಲಕ್ಕೆತ್ತಿದವು.**
**ಗರ್ಜಿಸುವ ಗಾಳಿ ಅದನ್ನು ಅತ್ತಿಂದಿತ್ತ ಚೆಂಡಾಡಿತು.**
**ಬೋಬಕ್ ಬಿರುಗಾಳಿಯ ಸೆಳೆತದಲ್ಲಿ ಸಿಲುಕಿ ತೊಳಲಾಡತೊಡಗಿತು.**



There were other things too
trapped in the hurricane.


These things started colliding and hitting
Bobak.

After some time Bobak started panting and
was injured at several places.

After being tossed about in the storm Bobak
started repenting over his deeds.


Why did he follow the leader in search of a
new pasture?

**ಈ ಸುಂಟರಗಾಳಿಯ ಹೊಡೆತಕ್ಕೆ ಸಿಲುಕಿಕೊಂಡ ಬೇರೆ ವಸ್ತುಗಳೂ ಇದ್ದುವು.**
**ಅವು ಬೋಬಕ್‌ಗೆ ಡಿಕ್ಕಿ ಹೊಡೆಯತೊಡಗಿದವು.**
**ಕೆಲ ಕಾಲದ ನಂತರ ಬೋಬಕ್ ಮೇಲುಸಿರು ಬಿಡಲಾರಂಭಿಸಿತು. ಅದಕ್ಕೆ ಹಲವೆಡೆಗಳಲ್ಲಿ ಗಾಯಗಳೂ ಆಗಿದ್ದವು.**
**ಬಿರುಗಾಳಿಯ ಬೀಸಾಟದ ನಡುವಿನಲ್ಲಿ ಬೋಬಕ್ ತನ್ನ ಕಾರ್ಯದ ಬಗ್ಗೆ ಪಶ್ಚಾತ್ತಾಪ ಪಡತೊಡಗಿತು.**
**ಹೊಸತೊಂದು ಹುಲ್ಲುಗಾವಲನ್ನು ಹುಡುಕುತ್ತಾ ನಾಯಕನ ಹಿಂದೆ ತಾನೇಕೆ ಬಂದೆ ?**



First of all Bobak became pale with fright.

ಎಲ್ಲಕ್ಕೂ ಮೊದಲು ಬೋಬಕ್ ಭಯದಿಂದ ಬಿಳಿಚಿಕೊಂಡಿತ್ತು.



Then his body turned green,
and he feet like vomiting.

Bobak started pitying himself.


He began to feel terribly ill.

He thought he will not live for long.

Then Bobak saw the leader also tossing
up-and-down in the storm.


The leader was in a worse situation than
Bobak.

ಬೋಬಕ್‌ಗೆ ಹೊಟ್ಟೆ ತೊಳೆಸಿದಂತಾಯಿತು.
ಅದಕ್ಕೆ ತನ್ನ ಬಗೆಗೇ ಅನುಕಂಪವುಂಟಾಯಿತು.
ತೀವ್ರವಾಗಿ ದೇಹ ಬಳಲಿದಂತೆ ಆಗಿ ತಾನು ಇನ್ನು ಹೆಚ್ಚು ಸಮಯ
ಉಳಿಯಲಾರೆನೆನ್ನಿಸಿತು.
ಆಗ ಬೋಬಕ್ ತನ್ನ ಗುಂಪಿನ ಮುಖಂಡನೂ ಆ ಬಿರುಗಾಳಿಯಲ್ಲಿ
ಸಿಲುಕಿಕೊಂಡು ತೊಳಲಾಡುತ್ತಿರುವುದನ್ನು ಕಂಡಿತು.
ನಾಯಕ ಮೇಕೆ ಬೋಬಕ್‌ಗಿಂತ ಹೀನ ಸ್ಥಿತಿಯಲ್ಲಿತ್ತು.



Just then a strong gush of wind came and threw
Bobak out of the vortex of the hurricane.

**ಅಷ್ಟರಲ್ಲಿ ಗಾಳಿಯ ಒಂದು ಭಾರೀ ಹೊಡೆತ ಆ ಸುಂಟರಗಾಳಿಯ ನಡುವಿನಿಂದ ಬೋಬಕ್‌ನನ್ನು ಎಳೆದು ಹೊರಗೆಸೆಯಿತು.**



Bobak fell in a field. Luckily, the soil was soft, so his bones did not break.
But still he was badly injured.

For a long time he just kept lying in the field.

Then he looked all around him. His body had become stiff and every part was aching.

But he had learnt a new lesson.
He would never forget this lesson.

ಬೋಬಕ್ ಬಯಲೊಂದರಲ್ಲಿ ಹೋಗಿ ಬಿದ್ದಿತು. ಸುದೈವದಿಂದ ಹೊಲವೊಂದರ ಮೆದು ಮಣ್ಣಿನ ಮೇಲೆ ಬಿದ್ದುದರಿಂದ ಅದರ ಮೂಳೆಗಳು ಮುರಿಯಲಿಲ್ಲ.
ಆದರೂ ಅದಕ್ಕೆ ಬಹಳಷ್ಟು ಗಾಯಗಳಾಗಿದ್ದವು.
ತುಂಬಾ ಹೊತ್ತು ಆ ಹೊಲದಲ್ಲಿ ಸುಮ್ಮನೆ ಬಿದ್ದುಕೊಂಡಿತ್ತು. ಎದ್ದು ಸುತ್ತಲೂ ನೋಡಿತು. ಅದರ ದೇಹ ಸೆಟೆದುಕೊಂಡಿತ್ತು. ಮೈಯೆಲ್ಲಾ ನೋಯುತ್ತಿತ್ತು.
ಆದರೆ ಅದು ಹೊಸತೊಂದು ಪಾಠ ಕಲಿತಿತ್ತು.
ಎಂದೂ ಮರೆಯದಂತಹ ಪಾಠವಾಗಿತ್ತದು.



Now he will not go from one place to the other simply because others are going there.
Henceforth, he will decide for himself. Where should he go? Why should he go?
How should he go? From now on he will make his own decisions.

**ಈಗ ಬೋಬಕ್ ಒಂದೆಡೆಯಿಂದ ಇನ್ನೊಂದೆಡೆಗೆ ಯಾರೋ ಹೋಗುವರೆಂದು ಹೋಗುವುದಿಲ್ಲ.**
**ಅದು ಈಗ ತನ್ನ ಬಗ್ಗೆ ತಾನೇ ತೀರ್ಮಾನ ತೆಗೆದುಕೊಳ್ಳುತ್ತದೆ.**
**ತಾನು ಎಲ್ಲಿಗೆ ಹೋಗಬೇಕು? ಏಕೆ ಹೋಗಬೇಕು? ಹೇಗೆ ಹೋಗಬೇಕು?**
**ಈ ಎಲ್ಲಾ ನಿರ್ಧಾರಗಳು ಇನ್ನು ಮುಂದೆ ಅದರ ಸ್ವಂತದವೇ!**

Now Bobak thinks for himself.
He is much happier than he was before.

END

**ಈಗ ಬೋಬಕ್ ತಾನೇ ಯೋಚಿಸುತ್ತದೆ.**
**ಅದು ಮೊದಲಿಗಿಂತ ತುಂಬಾ ಸಂತಸದಿಂದಿದೆ.**

**ಮುಗಿಯಿತು**